## ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು. ದಿನಾಂಕ:26.3.2020.

**ಆದೇಶ**

COVID -19 ವೈರಾಣು ಪರಿಣಾಮಗಳನ್ನು ತಡೆಗಟ್ಟಲು ಕೇಂದ್ರೀಯ ಗೃಹ ಮಂತ್ರಾಲಯದ ಆದೇಶ ಸಂಖ್ಯೆ: 40-3/2020-DM-1(A), ದಿ.24.03.2020ರಲ್ಲಿ ಹಾಗೂ ಆದೇಶ ಸಂಖ್ಯೆ: 40-3/2020-DM-1(A), ದಿ.25.03.2020ರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾರ್ಗಸೂಚಿ ಹೊರಡಿಸಲಾಗಿದೆ.

2) ಕೇಂದ್ರ ಸರ್ಕಾರದ ದಿ.24.03.2020 ಹಾಗೂ 25.03.2020ರ ಮಾರ್ಗಸೂಚಿಗಳನ್ನು **(ಪ್ರತಿ ಲಗ್ತಿಸಿದೆ)** ಸಂಬಂಧಪಟ್ಟ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲು ಈ ಮೂಲಕ ಆದೇಶಿಸಲಾಗಿದೆ.

3) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸುವ ಕುರಿತು ದಿ.25.3.2020ರಂದು ನಡೆದಿರುವ ರಾಜ್ಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಸಮಿತಿಯ ನಿರ್ಣಯದಂತೆ, ಕೇಂದ್ರೀಯ ಗೃಹ ಮಂತ್ರಾಲಯವು ಹೊರಡಿಸಿರುವ ದಿ.24.03.2020ರ ಮಾರ್ಗಸೂಚಿ ಹಾಗೂ 25.03.2020ರ ಸೇರ್ಪಡೆ ಆದೇಶ (Addendum) ಗಳನ್ನು ಒಳಗೊಂಡಂತೆ ಹೆಚ್ಚುವರಿಯಾಗಿ ಈ ಕೆಳಕಂಡ ಅವಶ್ಯವಿರುವ ಇಲಾಖೆಗಳು ನಿರ್ಬಂಧಿತ (Lockdown)ದಿಂದ **ವಿನಾಯಿತಿ ನೀಡಲಾಗಿದೆ:**

1. ಪಶು ವೈದ್ಯಕೀಯ ಸೇವಾ ಆಸ್ಪತ್ರೆ/ಚಿಕಿತ್ಸಾಲಯ ಹಾಗೂ ಪಶು ವೈದ್ಯಕೀಯ ಔಷಧಿ ಹಾಗೂ ಪಶು ಆಹಾರ ಅಂಗಡಿಗಳು;
2. ರೇಷ್ಮೆಗೂಡು ಮಾರುಕಟ್ಟೆ;
3. ಕೃಷಿ ಮಾರುಕಟ್ಟೆ ಇಲಾಖೆಯ ಮೇಲ್ವಿಚಾರಣೆಯಲ್ಲಿ ಹಣ್ಣು ತರಕಾರಿಗಳು ಸೇರಿದಂತೆ ಆಹಾರ ಸಗಟು ವ್ಯಾಪಾರ;
4. ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುವ ಲಾರಿ ವಾಹನ ಚಾಲಕರು / ಕ್ಲೀನರ್‌ಗಳಿಗೆ ಕೇವಲ ಪಾರ್ಸಲ್ ಮೂಲಕ ಆಹಾರ ವಿತರಣೆ (Parcel Food) ಮಾಡುವ ಆಯ್ದ ಡಾಬಾ/ ಹೋಟಲ್/ ರೆಸ್ಟೋರೆಂಟ್‌ಗಳು;
5. Unique Identification Authority of India (UIDAI) ಹಾಗೂ National Informatics Centre (NIC) ಕಛೇರಿಗಳು.

4) ಸದರಿ ಆದೇಶವನ್ನು ವಿಪತ್ತು ನಿರ್ವಹಣೆ ಕಾಯ್ದೆ, 2005ರ ಸೆಕ್ಷನ್ 22(2)(ಹೆಚ್) ಹಾಗೂ 24(ಎಲ್) ರನ್ವಯ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆಯಡಿ ರಾಜ್ಯ ಕಾರ್ಯಕಾರಿ ಸಮಿತಿಗೆ ಪತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

(ಟಿ.ಎಂ.ವಿಜಯ ಭಾಸ್ಕರ್)
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು
ಕರ್ನಾಟಕ ಸರ್ಕಾರ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು